# ಕರ್ನಾಟಕ ವಿಧಾನ ಪರಿಷತ್ತು

01. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1028

02. ಮಾನ್ಯ ವಿಧಾನ ಪರಿಷತ್ತು ಸದಸ್ಯರ ಹೆಸರು : **ಶ್ರೀ ಶರವಣ.ಟಿ.ಎ**
(ವಿಧಾನಸಭೆಯಿಂದ ಚುನಾಯಿತರಾದವರು)

03. ಉತ್ತರಿಸುವ ದಿನಾಂಕ : 14.12.2023

04. ಉತ್ತರಿಸುವ ಸಚಿವರು : ಮಾನ್ಯ ಗೃಹ ಸಚಿವರು

| ಕ್ರ.ಸ | ಪ್ರಶ್ನೆಗಳು | ಉತ್ತರ |
|---|---|---|
| ಅ | ವಿದೇಶಿ ಪ್ರಜೆಗಳ ನೋಂದಣಿ ಕೇಂದ್ರ (ಎಫ್.ಆರ್.ಆರ್.ಒ) ಪ್ರಕಾರ ಎಷ್ಟು ವಿದೇಶಿಗರು ರಾಜ್ಯದಲ್ಲಿ ನೆಲೆಸಿದ್ದಾರೆ; | ವಿದೇಶಿಯರ ಪ್ರಾದೇಶಿಕ ನೋಂದಣಿ ಕಛೇರಿ, ಬೆಂಗಳೂರು (FRRO) ರವರ ಮಾಹಿತಿಯ ಪ್ರಕಾರ ಒಟ್ಟು 7321 ವಿದೇಶಿಯರುಗಳು ರಾಜ್ಯದಲ್ಲಿ ನೆಲೆಸಿರುತ್ತಾರೆ. |
| ಆ | ಪಾಸ್ ಪೋರ್ಟ್ ಅವಧಿ ಮುಗಿದ ಮೇಲೆ ಅಕ್ರಮವಾಗಿ ನೆಲೆಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಎಷ್ಟು ವಿದೇಶಿಗರು ನೆಲೆಸಿದ್ದಾರೆ ಅವರು ಯಾವ ದೇಶದವರು; ಎಷ್ಟು ಜನರ ವಿರುದ್ಧ ಎಫ್.ಐ.ಆರ್ ದಾಖಲಾಗಿವೆ; (ಜಿಲ್ಲಾವಾರು ಮಾಹಿತಿ ನೀಡುವುದು) | ಪಾಸ್‌ಪೋರ್ಟ್ ಅವಧಿ ಮುಗಿದ ಮೇಲೆ ಅಕ್ರಮವಾಗಿ ನೆಲೆಸಿರುವ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಪ್ರಸ್ತುತ ದಿನಾಂಕ 31.10.2023 ರ ಅಂತ್ಯಕ್ಕೆ 635 ಜನ ಪಾಸ್‌ಪೋರ್ಟ್ ಅವಧಿ ಮುಗಿದ ನಂತರವೂ ಕೂಡ ವಾಸವಾಗಿರುವುದು ಕಂಡುಬಂದಿರುತ್ತದೆ. ಸದರಿಯವರ ದೇಶವಾರು ಮಾಹಿತಿಯನ್ನು **ಅನುಬಂಧ-01** ರಲ್ಲಿ ನೀಡಿದೆ.<br><br>ಪಾಸ್‌ಪೋರ್ಟ್ ಅವಧಿ ಮುಗಿದ ನಂತರವೂ ನೆಲೆಸಿರುವ ಒಟ್ಟು 242 ಜನ ವಿದೇಶಿಯರುಗಳ ಮೇಲೆ 172 ಪ್ರಕರಣಗಳು ದಾಖಲಾಗಿರುತ್ತದೆ. ವಿವರ ಹೀಗಿದೆ. |

| ಕ್ರ.ಸ | ನಗರ ಮತ್ತು ಜಿಲ್ಲೆಗಳು | ಆರೋಪಿಗಳ ಸಂಖ್ಯೆ | ದಾಖಲಾದ ಪ್ರಕರಣಗಳು |
|---|---|---|---|
| 1 | ಬೆಂಗಳೂರು ನಗರ | 230 | 160 |
| 2 | ಬೆಂಗಳೂರು ಜಿಲ್ಲೆ | 03 | 03 |
| 3 | ಮೈಸೂರು ನಗರ | 06 | 06 |
| 4 | ರಾಯಚೂರು ಜಿಲ್ಲೆ | 01 | 01 |
| 5 | ಉತ್ತರ ಕನ್ನಡ ಜಿಲ್ಲೆ ಕಾರವಾರ | 01 | 01 |
| 6 | ಕಲಬುರಗಿ ನಗರ | 01 | 01 |
| | **ಒಟ್ಟು** | **242** | **172** |

| ಕ್ರ.ಸ | ಪ್ರಶ್ನೆಗಳು | ಉತ್ತರ |
|---|---|---|
| ಇ | ಕಳೆದ ಒಂದು ವರ್ಷದಲ್ಲಿ ಅಕ್ರಮವಾಗಿ ನೆಲೆಸಿದ ಎಷ್ಟು ವಿದೇಶಿಗರನ್ನು ಅವರ ದೇಶಕ್ಕೆ ಕಳುಹಿಸಲಾಗಿದೆ; ವಿದೇಶಿಗರು ರಾಜ್ಯದಲ್ಲಿ ನೆಲೆಯೂರಲು ಕಾರಣಗಳೇನು; ಯಾವ ದಾಖಲೆಗಳ ಆಧಾರದ ಮೇಲೆ ವಾಸಿಸುತ್ತಿದ್ದಾರೆ; | ಕಳೆದ ಒಂದು ವರ್ಷದಲ್ಲಿ ಅಕ್ರಮವಾಗಿ ನೆಲೆಸಿದ್ದ ಒಟ್ಟು 262 ಜನ ವಿದೇಶಿಯರನ್ನು ಅವರ ದೇಶಕ್ಕೆ ಕಳುಹಿಸಲಾಗಿದೆ. ವಿವರ ಕೆಳಕಂಡಂತಿದೆ. |

| ಕ್ರ.ಸ | ನಗರ ಮತ್ತು ಜಿಲ್ಲೆಗಳು | ಕಳೆದ ಒಂದು ವರ್ಷದಲ್ಲಿ ಅವರ ದೇಶಕ್ಕೆ ಕಳುಹಿಸಲಾದ ವಿದೇಶಿಗರುಗಳು |
|---|---|---|
| 1 | ಬೆಂಗಳೂರು ನಗರ | ದಿನಾಂಕ:01.01.2022 ರಿಂದ 31.10.2023 ರವರೆಗೆ ಒಟ್ಟು 220 ಜನ ವಿದೇಶಿಯರನ್ನು ಅವರ ದೇಶಕ್ಕೆ ಕಳುಹಿಸಲಾಗಿರುತ್ತದೆ. |

| | | |
|---|---|---|
| 2 | ಮಂಗಳೂರು ನಗರ | ಕಳೆದ ಒಂದು ವರ್ಷದಲ್ಲಿ ಅಕ್ರಮವಾಗಿ ನೆಲೆಸಿದ 38 ಜನ ಶ್ರೀಲಂಕಾ ಪ್ರಜೆಗಳನ್ನು ದಿನಾಂಕ 26.01.2023 ರಂದು ಗಡಿಪಾರು ಮಾಡಲಾಗಿರುತ್ತದೆ. |
| 3 | ಚಿಕ್ಕಮಗಳೂರು ಜಿಲ್ಲೆ | ಎನ್.ಆರ್.ಪುರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ 04 ಬಾಂಗ್ಲಾದೇಶಿಯರನ್ನು ದಿನಾಂಕ 14.03.2023 ರಂದು ಬಾಂಗ್ಲಾದೇಶದ ಢಾಖಾಗೆ ವಿಮಾನದ ಮೂಲಕ ಕಳುಹಿಸಲಾಗಿದೆ. |
| **ಒಟ್ಟು** | | **262** |

ವಿದೇಶಿಯರು ರಾಜ್ಯದಲ್ಲಿ ನೆಲೆಯೂರಲು ಕಾರಣಗಳೆಂದರೆ ವ್ಯಾಪಾರ ಮಾಡಲು, ವಿದ್ಯಾಭ್ಯಾಸಕ್ಕಾಗಿ, ವೈದ್ಯಕೀಯ ತಪಾಸಣೆಗಾಗಿ, ಸಂಬಂಧಿಕರ ಭೇಟಿಗಾಗಿ, ವಿವಿಧ ತರಬೇತಿಗಾಗಿ ಹಾಗೂ ಇತರೆ ಕಾರಣಗಳಿಂದ ನೆಲೆಸಿರುತ್ತಾರೆ.

ವಿದೇಶಿಯರು ಪಾಸ್‌ಪೋರ್ಟ್, ವೀಸಾಗಳು ಹಾಗೂ ರೆಸಿಡೆನ್ಶಿಯಲ್ ಪರ್ಮಿಟ್‌ಗಳ ಆಧಾರದ ಮೇಲೆ ವಾಸಿಸುತ್ತಿರುತ್ತಾರೆ.

ಈ

ರಾಜಧಾನಿಯಲ್ಲಿ ನಿತ್ಯ ನಡೆಯುವ ಅಪರಾಧ ಕೃತ್ಯಗಳಾದ ಮಾದಕ ವಸ್ತುಗಳ ಸಾಗಣಿ ಮತ್ತು ಸೈಬರ್‌ಕ್ರೈಂಗಳಲ್ಲಿ ಅತಿ ಹೆಚ್ಚು ಭಾಗಿಯಾಗಿರುವವರು ಯಾರು? ಇದನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳ ವಿವರ ನೀಡುವುದು?

ಮಾದಕ ವಸ್ತುಗಳ ಸಾಗಾಣಿಕೆ ಪ್ರಕರಣಗಳಲ್ಲಿ ಭಾಗಿಯಾದ ಆರೋಪಿಗಳಲ್ಲಿ ಸ್ಥಳೀಯರ ಜೊತೆಗೆ ಅತಿ ಹೆಚ್ಚಿನ ಪ್ರಮಾಣದಲ್ಲಿ ಕೇರಳ, ಒಡಿಶಾ, ತೆಲಂಗಾಣ, ಆಂಧ್ರಪ್ರದೇಶ, ತಮಿಳುನಾಡು, ಮಹಾರಾಷ್ಟ್ರ, ಗೋವಾ, ಪಶ್ಚಿಮ ಬಂಗಾಳ, ಬಿಹಾರ ಮತ್ತು ಇತರೆ ರಾಜ್ಯಗಳಿಗೆ ಸೇರಿದವರಾಗಿರುತ್ತಾರೆ. ಜೊತೆಗೆ ವಿದೇಶಿ ಮೂಲದ ನೈಜೀರಿಯಾ ದೇಶದ ಪ್ರಜೆಗಳು ಇಂತಹ ಕೃತ್ಯಗಳಲ್ಲಿ ಅತಿ ಹೆಚ್ಚಾಗಿ ಭಾಗಿಗಳಾಗಿರುವುದು ಕಂಡು ಬಂದಿರುತ್ತದೆ.

ಮಾದಕ ವಸ್ತುಗಳ ಸಾಗಾಣೆ ಮತ್ತು ಸೈಬರ್ ಅಪರಾಧ ಪ್ರಕರಣಗಳನ್ನು ತಡೆಗಟ್ಟಲು ಕೈಗೊಂಡ ಕ್ರಮಗಳ ಬಗ್ಗೆ **ಅನುಬಂಧ-02** ರಲ್ಲಿ ನೀಡಿದೆ.

ಬೆಂಗಳೂರು ನಗರದ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಅಪರಾಧ ಕೃತ್ಯಗಳನ್ನು ತಡೆಗಟ್ಟಲು ಕಟ್ಟುನಿಟ್ಟಿನ ಕಾನೂನು ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ. ಮಾದಕ ವಸ್ತುಗಳ ಸಾಗಾಣಿಕೆ ಮತ್ತು ಸೈಬರ್ ಅಪರಾಧ ಪ್ರಕರಣಗಳಲ್ಲಿ ತೊಡಗಿದವರ ವಿರುದ್ಧ ಪ್ರಕರಣಗಳನ್ನು ದಾಖಲಿಸಿ ಕಾನೂನು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಕಳೆದ ಮೂರು ವರ್ಷಗಳಲ್ಲಿ ಮಾದಕ ವಸ್ತುಗಳ ಸಾಗಾಣಿಕೆ ಮತ್ತು ಸೈಬರ್ ಅಪರಾಧ ಪ್ರಕರಣಗಳಲ್ಲಿ ಭಾಗಿಯಾದವರ ಮೇಲೆ ದಾಖಲಿಸಿರುವ ಪ್ರಕರಣಗಳ ಅಂಕಿ ಅಂಶಗಳ ವಿವರಗಳನ್ನು ಈ ಕೆಳಕಂಡಂತೆ ವಿವರಿಸಲಾಗಿದೆ.

**2021 ರಿಂದ 2023 (30.11.2023ರವರೆಗೆ) ಮಾದಕ ವಸ್ತುಗಳ ಸಾಗಾಣಿಕೆ ಮಾಡಿದವರ ಮೇಲೆ ದಾಖಲಿಸಿರುವ ಪ್ರಕರಣಗಳ ಅಂಕಿ ಅಂಶಗಳ ವಿವರ ಈ ಕೆಳಕಂಡಂತಿದೆ:**

| ವರ್ಷಾವಾರು | ದಾಖಲಿಸಿರುವ ಪ್ರಕರಣಗಳ ವಿವರ | ದಸ್ತಗಿರಿ ಮಾಡಲಾದ ಆರೋಪಿಗಳ ವಿವರ |
|---|---|---|
| **2021** | 696 | 1184 |
| **2022** | 579 | 977 |
| **2023 (30.11.2023ರವರೆಗೆ)** | 620 | 899 |

**2021 ರಿಂದ 2023 (30.11.2023ರವರೆಗೆ) ದಾಖಲಿಸಿರುವ ಸೈಬರ್ ಕ್ರೈಂ ಪ್ರಕರಣಗಳ ಅಂಕಿ ಅಂಶಗಳ ವಿವರ ಈ ಕೆಳಕಂಡಂತಿದೆ:**

| ವರ್ಷಾವಾರು | ದಾಖಲಿಸಿರುವ ಪ್ರಕರಣಗಳ ವಿವರ | ದಸ್ತಗಿರಿ ಮಾಡಲಾದ ಆರೋಪಿಗಳ ವಿವರ |
|---|---|---|
| **2021** | 6422 | 195 |
| **2022** | 9940 | 352 |
| **2023 (30.11.2023ರವರೆಗೆ)** | 15979 | 250 |

ಸಂಖ್ಯೆ: ಒಇ 538 ಪಿಎಂಎಸ್ 2023

(ಡಾ: ಜಿ. ಪರಮೇಶ್ವರ)
ಗೃಹ ಸಚಿವರು

ಅನುಬಂಧ-1

Annexure-1

| STATISTICS OF COUNTRY-WISE NUMBER OF FOREIGNERS OVERSTAYING AS ON 31.10.2023 | | |
|---|---|---|
| SL.NO | NATIONALITY | NUMBER OF FOREIGNERS OVERSTAYING |
| 1 | NIGERIA | 130 |
| 2 | SUDAN | 90 |
| 3 | CONGO, DEMOCRATIC REPUBLIC OF THE (ZAIRE) | 88 |
| 4 | YEMEN | 67 |
| 5 | CAMEROON | 21 |
| 6 | UGANDA | 21 |
| 7 | BANGLADESH | 19 |
| 8 | SOUTH SUDAN | 16 |
| 9 | TANZANIA | 16 |
| 10 | IRAN | 15 |
| 11 | COTE D'IVOIRE | 14 |
| 12 | UNITED STATES OF AMERICA | 13 |
| 13 | IRAQ | 11 |
| 14 | SYRIA | 9 |
| 15 | ANGOLA | 8 |
| 16 | UNITED KINGDOM | 7 |
| 17 | CHAD | 6 |
| 18 | MALDIVES | 6 |
| 19 | TIBETIAN ORIGIN | 6 |
| 20 | GUINEA | 5 |
| 21 | CHINA | 4 |
| 22 | ETHIOPIA | 4 |
| 23 | MALI | 4 |
| 24 | RWANDA | 4 |
| 25 | SOMALIA | 4 |
| 26 | CANADA | 3 |
| 27 | GUINEA BISSAU | 3 |
| 28 | IVORY COST | 3 |
| 29 | NETHERLANDS | 3 |
| 30 | SRI LANKA | 3 |
| 31 | GHANA | 2 |
| 32 | INDONESIA | 2 |
| 33 | PHILIPPINES | 2 |
| 34 | THAILAND | 2 |
| 35 | UGANDA | 1 |
| 36 | BRAZIL | 1 |
| 37 | FIJI | 1 |
| 38 | FRANCE | 1 |
| 39 | GERMANY | 1 |
| 40 | ISRAEL | 1 |
| 41 | KENYA | 1 |
| 42 | KOREA, REPUBLIC OF | 1 |
| 43 | KUWAIT | [illegible] |
| 44 | [illegible] | |

| | | |
|---|---|---|
| 45 | LIBYA | 1 |
| 46 | MALAWI | 1 |
| 47 | MEXICO | 1 |
| 48 | NAMIBIA | 1 |
| 49 | NEPAL | 1 |
| 50 | OMAN | 1 |
| 51 | PALESTINE | 1 |
| 52 | PHILLIPPINES | 1 |
| 53 | RUSSIAN FEDERATION | 1 |
| 54 | SAUDI ARABIA | 1 |
| 55 | SOUTH AFRICA | 1 |
| 56 | UZBEKISTAN | 1 |
| 57 | VIETNAM | 1 |
| 58 | ZIMBABWE | 1 |
| | **Grand Total** | **635** |

## ಅನುಬಂಧ -2

ಮಾದಕ ವಸ್ತುಗಳ ಸಾಗಾಣಿ ಮಾಡುವುದನ್ನು ತಡೆಗಟ್ಟಲು ಈ ಕೆಳಕಂಡ ಕ್ರಮಗಳನ್ನು ಜರುಗಿಸಲಾಗಿದೆ.

- ಸಾರ್ವಜನಿಕರ ಅನುಕೂಲಕ್ಕಾಗಿ ಮಾದಕ ವಸ್ತು ಮಾರಾಟ ಮತ್ತು ಸೇವನೆ ಮಾಡುವವರ ವಿರುದ್ಧ ದೂರು ನೀಡಲು ಟೋಲ್ ಫ್ರೀ ಸಂಖ್ಯೆ:1908 ದೂರವಾಣಿಯ ಮುಖಾಂತರ ಸಂಪರ್ಕಿಸಿ ಮಾಹಿತಿ ನೀಡುವ ಯೋಜನೆಯನ್ನು ಪ್ರಾರಂಭಿಸಲಾಗಿದೆ.

- ಶಾಲಾ ಕಾಲೇಜುಗಳಿಗೆ ಭೇಟಿ ನೀಡಿ ವಿದ್ಯಾರ್ಥಿಗಳಿಗೆ ಮಾದಕ ವಸ್ತುಗಳ ಸೇವನೆಯಿಂದ ಆಗುವ ದುಷ್ಪರಿಣಾಮಗಳ ಬಗ್ಗೆ ಡ್ರಗ್ ಅವೇರ್‌ನೆಸ್ ಪ್ರೋಗ್ರಾಮ್ ಅನ್ನು ನಡೆಸಿ, ಉಪನ್ಯಾಸ, ದೃಶ್ಯರೂಪಕಗಳ ಮೂಲಕ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಶಾಲಾ ಕಾಲೇಜುಗಳ ಹತ್ತಿರ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಮಾದಕ ವಸ್ತುಗಳನ್ನು ಮಾರಾಟ ಮಾಡುತ್ತಿರುವ ಹಾಗೂ ಮಾದಕ ವಸ್ತು ಸೇವನೆ ಮಾಡುವವರ ವಿರುದ್ಧ ತ್ವರಿತವಾಗಿ ಕಠಿಣ ಕ್ರಮ ಕೈಗೊಳ್ಳಲಾಗಿದೆ.

- ಸಾರ್ವಜನಿಕ ಸ್ಥಳಗಳು, ಜನಸಂದಣಿ ಪ್ರದೇಶಗಳು ಹಾಗೂ ಪ್ರಮುಖ ವ್ಯಕ್ತಿಗಳು ವಾಸಿಸುತ್ತಿರುವ ಪ್ರದೇಶಗಳು ಮತ್ತು ಕೊಳಚೆ ಪ್ರದೇಶಗಳಲ್ಲಿ ಸಾರ್ವಜನಿಕ ಸಭೆ, ಮೆರವಣಿಗೆಗಳನ್ನು ನಡೆಸುವುದರ ಮೂಲಕ ವ್ಯಾಪಕ ಪ್ರಚಾರ ಕೈಗೊಳ್ಳಲು ಹಾಗೂ ಸಾರ್ವಜನಿಕರಲ್ಲಿ ಮಾದಕ ವಸ್ತುಗಳ ಸೇವನೆ ವಿರುದ್ಧ ಜಾಗೃತಿ ಮೂಡಿಸಲು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಅಲ್ಲದೆ, ಠಾಣಾ ಸರಹದ್ದಿನ ಬೀಟ್ ಮತ್ತು ಸಬ್-ಬೀಟ್‌ಗಳಲ್ಲಿ ಆಗ್ಗಿಂದಾಗ್ಗೆ ಸಭೆಯನ್ನು ನಡೆಸಿ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ನಡೆಸಲಾಗಿದೆ.

- ಒಂದು ಬಾರಿಗಿಂತ ಹೆಚ್ಚು ಬಾರಿ ಎನ್.ಡಿ.ಪಿ.ಎಸ್. ಪ್ರಕರಣಗಳಲ್ಲಿ ಭಾಗಿಯಾದ ಅಥವಾ ಹವ್ಯಾಸಿ ಆರೋಪಿತರಿಗೆ PIT-NDPS ಕಾಯ್ದೆ ಅಡಿಯಲ್ಲಿ ಕ್ರಮ ಜರುಗಿಸಲಾಗಿದೆ.

- ನಗರಕ್ಕೆ ಮಾದಕ ವಸ್ತುಗಳು (ಗಾಂಜಾ) ಸರಬರಾಜು ಆಗುವ ಮಾರ್ಗಗಳ ಮೇಲೆ ತೀವ್ರ ನಿಗಾವಣೆ ಇಟ್ಟು ಕಟ್ಟುನಿಟ್ಟಾದ ಕಾನೂನು ಕ್ರಮಗಳನ್ನು ಜರುಗಿಸಲಾಗುತ್ತಿದೆ. Bitcoin ಬಳಸಿ ಡಾರ್ಕ್‌ನೆಟ್ (Darknet) ಮುಖಾಂತರ ಡ್ರಗ್ಸ್ ಸರಬರಾಜು ಮಾಡುತ್ತಿದ್ದ ಜಾಲವನ್ನು ಪತ್ತೆ ಮಾಡಿ ಕಾನೂನು ಕ್ರಮ ಕೈಗೊಳ್ಳಲಾಗಿರುತ್ತದೆ. ಅಲ್ಲದೆ, ವಿದೇಶಗಳಿಂದ ಪೋಸ್ಟಲ್/ಕೊರಿಯರ್ಸ್ ಮುಖಾಂತರ ನಗರಕ್ಕೆ ಡ್ರಗ್ಸ್ ಸರಬರಾಜು ಮಾಡುತ್ತಿದ್ದ ಜಾಲವನ್ನು ಸಹ ಭೇದಿಸಲಾಗಿದೆ.

- ನಗರದಲ್ಲಿ ಡ್ರಗ್ಸ್ ಅಕ್ರಮಗಳನ್ನು ಪರಿಣಾಮಕಾರಿಯಾಗಿ ನಿಯಂತ್ರಿಸುವ ಸಲುವಾಗಿ NCB, DRI, Customs, Railway, Education ಇಲಾಖೆಗಳ ಅಧಿಕಾರಿಗಳ ಸಮನ್ವಯ ಸಭೆಯನ್ನು ನಡೆಸಲಾಗಿದೆ.

- ವಿದೇಶಿಯರು ವಿಶೇಷವಾಗಿ ಆಫ್ರಿಕಾ ಮೂಲದ ಪ್ರಜೆಗಳು ಮಾದಕ ವಸ್ತುಗಳ ಮಾರಾಟ/ಸೇವನೆಯ ಪ್ರಕರಣಗಳಲ್ಲಿ ಆರೋಪಿಗಳಿಗೆ ಯಾವ ಮೂಲಗಳಿಂದ ಮಾದಕ ವಸ್ತುಗಳ ಸರಬರಾಜಾಗುತ್ತಿವೆ ಎಂಬುವುದರ ಬಗ್ಗೆ ಸಂಪೂರ್ಣ ಮಾಹಿತಿ ಸಂಗ್ರಹಿಸಿ, ಇಂತಹ ಕೃತ್ಯಗಳಲ್ಲಿ ತೊಡಗಿರುವ ವಿದೇಶಿಯರನ್ನು ದಸ್ತಗಿರಿ ಮಾಡಿ ಅವರುಗಳ ಪಾಸ್‌ಪೋರ್ಟ್‌ಗಳನ್ನು ಮುಟ್ಟುಗೋಲು ಹಾಕಿಕೊಂಡು ಸದರಿಯವರ ಗಡಿಪಾರಿಗೆ ಕ್ರಮ ಕೈಗೊಳ್ಳಲಾಗುತ್ತಿದೆ. ಅಂತಹವರ ವಿರುದ್ಧ ವಿಶೇಷ ಕಾರ್ಯಾಚರಣೆಗಳನ್ನು ನಡೆಸಿ ಕಠಿಣ ಕಾನೂನಿನ ಕ್ರಮ ಕೈಗೊಳ್ಳಲಾಗಿದೆ.

- ಯುವಕರು ಹೆಚ್ಚಾಗಿ ಸೇರುವ ಸ್ಥಳಗಳಾದ ಬಾರ್ ಮತ್ತು ರೆಸ್ಟೋರೆಂಟ್, ಕಾಫಿ-ಶೇ, ಪಬ್, ಡ್ಯಾನ್ಸ್‌ಬಾರ್, ಶಾಲಾ ಕಾಲೇಜು ಆವರಣ, ಬಸ್ ನಿಲ್ದಾಣ ಹಾಗೂ ಇನ್ನಿತರೆ ಪ್ರದೇಶಗಳಲ್ಲಿ ಮಾದಕ ದ್ರವ್ಯ ವಸ್ತುಗಳನ್ನು ಮಾರಾಟ ಮಾಡುತ್ತಿರುವ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿ ಕಾನೂನಿನ ರೀತಿ ಕಟ್ಟುನಿಟ್ಟಿನ ಕ್ರಮ ಜರುಗಿಸಲಾಗುತ್ತಿದೆ. ಸಾರ್ವಜನಿಕರ ಗಮನ ಸೆಳೆಯಲು ಬ್ಯಾನರ್, ಪೋಸ್ಟರ್‌ಗಳನ್ನು ಜನಸಂದಣಿ ಇರುವ

ಸ್ಥಳಗಳಲ್ಲಿ ಪ್ರದರ್ಶಿಸಿ ಕರಪತ್ರ ಹಂಚಲಾಗುತ್ತಿದೆ. ಜೊತೆಗೆ ಕಿರುಚಿತ್ರಗಳ ಮೂಲಕ ಅರಿವು ಮೂಡಿಸುವ ಕಾರ್ಯ ಮಾಡಲಾಗಿದೆ.

<u>**ಸೈಬರ್ ಅಪರಾಧ ಪ್ರಕರಣಗಳನ್ನು ತಡೆಗಟ್ಟಲು ಈ ಕೆಳಕಂಡ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.**</u>

- ಸೈಬರ್ ಅಪರಾಧ ಪ್ರಕರಣಗಳನ್ನು ಏಕತಾನತೆಯಿಂದ ತನಿಖೆಯ ಮಾಡಲು, ಬೆಂಗಳೂರು ನಗರದಲ್ಲಿ ಈಗಾಗಲೇ ಒಟ್ಟು 8 ಸಿ.ಇ.ಎನ್ ಪೊಲೀಸ್ ಠಾಣೆ ಹಾಗೂ ಒಂದು ಸೈಬರ್ ಪೊಲೀಸ್ ಠಾಣೆಗಳನ್ನು ತೆರೆಯಲಾಗಿದ್ದು, ಸಾರ್ವಜನಿಕರ ಶೀಘ್ರ ಸ್ಪಂದನೆಗಾಗಿ ಹಾಗೂ ಪ್ರಕರಣಗಳ ಶೀಘ್ರ ವಿಲೇವಾರಿಗಾಗಿ ಹೆಚ್ಚುವರಿ ಅಧಿಕಾರಿ/ಸಿಬ್ಬಂದಿಗಳ ಹುದ್ದೆಗಳನ್ನು ಸೃಜಿಸಿ ಕ್ರಮಕ್ಕೆಗೊಳ್ಳಲಾಗಿದೆ.

- ಸಾರ್ವಜನಿಕರ ಅನುಕೂಲಕ್ಕಾಗಿ 112 ಸಹಾಯವಾಣಿಯನ್ನು ತೆರೆಯಲಾಗಿದ್ದು, ಈ ಮೂಲಕ ಸಾರ್ವಜನಿಕರು ದೂರು ನೀಡಿದ ಕೂಡಲೇ ಆರೋಪಿಗಳ ಬ್ಯಾಂಕ್ ಖಾತೆಗಳನ್ನು ಫ್ರೀಜ್ ಮಾಡುವ ಮೂಲಕ ನೊಂದವರಿಗೆ ಶೀಘ್ರವಾಗಿ ಹಣ ಹಿಂದಿರುಗಿಸಲಾಗುತ್ತಿದೆ.

- ಸೈಬರ್ ಅಪರಾಧ ಪ್ರಕರಣಗಳನ್ನು ಪತ್ತೆ ಹಚ್ಚಲು ನಗರದ ಸಿ.ಇ.ಎನ್ ಪೊಲೀಸ್ ಠಾಣೆಗಳಿಗೆ ನುರಿತ ಹಾಗೂ ತರಬೇತಿ ಹೊಂದಿದ ಅಧಿಕಾರಿ ಸಿಬ್ಬಂದಿಗಳನ್ನು ನಿಯೋಜಿಸಲಾಗುತ್ತಿದೆ.

- ಸೈಬರ್ ಅಪರಾಧ ಪ್ರಕರಣಗಳಿಗೆ ಸಂಬಂಧಿಸಿದಂತೆ ಬ್ಯಾಂಕ್ ಹಾಗೂ ಸಾಮಾಜಿಕ ಮಾಧ್ಯಮ ಅಧಿಕಾರಿಗಳೊಂದಿಗೆ ಸಮನ್ವಯ ಸಭೆಗಳನ್ನು ನಡೆಸಿ ತನಿಖೆಗೆ ಸಹಕರಿಸುವಂತೆ ಸೂಚನೆಗಳನ್ನು ನೀಡಲಾಗಿದೆ.

- ಸೈಬರ್ ಟಿಪ್ ಆಫ್ ದಿ ಡೇ ಎಂಬ ಕಾರ್ಯಕ್ರಮದ ಮೂಲಕ ಸೈಬರ್ ಅಪರಾಧಗಳಿಗೆ ಸಂಬಂಧಿಸಿದಂತೆ ಸಾಮಾಜಿಕ ಮಾಧ್ಯಮಗಳ ಮೂಲಕ ಸಾರ್ವಜನಿಕರಲ್ಲಿ ಅರಿವು ಮೂಡಿಸಲಾಗುತ್ತಿದೆ.

- ಸೈಬರ್ ಅಪರಾಧ ಪ್ರಕರಣಗಳನ್ನು ದಾಖಲಿಸಲು ಸಾರ್ವಜನಿಕರ ಅನುಕೂಲಕ್ಕಾಗಿ ಕೇಂದ್ರ ಸರ್ಕಾರವು ಸೃಜಿಸಿರುವ ರಾಷ್ಟ್ರೀಯ ಸೈಬರ್ ಕ್ರೈಂ ಹೆಲ್ಪ್‌ಲೈನ್-1930 ಬಗ್ಗೆ ವ್ಯಾಪಕ ಪ್ರಚಾರ ಮಾಡಲಾಗಿದ್ದು, ಸಾರ್ವಜನಿಕರು ಮೋಸ ಹೋಗುವುದನ್ನು ತಡೆಯಲಾಗುತ್ತಿದೆ.

- ಇತ್ತೀಚಿನ ದಿನಗಳಲ್ಲಿ ಪ್ರಮುಖವಾಗಿ ವರದಿಯಾಗುತ್ತಿರುವ Fedex scam, Sextortion, Aadhar enabled payment scam, Loan App ಪ್ರಕರಣಗಳನ್ನು ಪತ್ತೆ ಮಾಡಲು ಉಪ ಪೊಲೀಸ್ ಆಯುಕ್ತರುಗಳ ನೇತೃತ್ವದಲ್ಲಿ ತಂಡಗಳನ್ನು ರಚಿಸಿ ಆರೋಪಿಗಳ ಪತ್ತೆಗೆ ಕ್ರಮಕ್ಕೈಗೊಳ್ಳಲಾಗಿದೆ.